ಶ್ರೀ ಆರ್. ರಾಮಲಿಂಗರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) ಮತ್ತು ಆ) 2004–05ನೇ ಸಾಲಿನಲ್ಲಿ ಹೊಸ ಸರ್ಕಾರಿ ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಆಯವ್ಯಯದಲ್ಲಿ ಹಣದ ಲಭ್ಯತೆ ಇಲ್ಲದೇ ಇರುವುದರಿಂದ ಹೊಸ ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡಿರುವುದಿಲ್ಲ.

1154 (1299) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಮಾನ್ಯ ಉಪ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಮಲೇನಾಡು ಪ್ರದೇಶಾಭಿವೃದ್ಧಿ ಮಂಡಳಿಯಡಿಯಲ್ಲಿ ಉಡುಪಿ ಜಿಲ್ಲೆಯ ಕುಂದಾಪುರ ವಿಧಾನಸಭಾ ಕ್ಷೇತ್ರದಲ್ಲಿ ಮುಕ್ತಾಯವಾದ ಎಷ್ಟು ಕಾಮಗಾರಿಗಳಿಗೆ ಬಿಲ್ಲು ಪಾವತಿಯಾಗಲು ಬಾಕಿ ಇವೆ ಕಾಮಗಾರಿಗಳ ಬಿಲ್ಲಿನ ವಿವರ ನೀಡುವುದು ;

ಆ) ಹಣ ಪಾವತಿಯಾಗದೇ ಇರಲು ಕಾರಣವೇನು, ಯಾವಾಗ ಪಾವತಿಸಲಾಗುವುದು ;

ಇ) ಮಂಜೂರಾದ ಕಾಮಗಾರಿಗಳನ್ನು ಮತ್ತು ಮಂಜೂರು ಆಗಬೇಕಾದ ಕಾಮಗಾರಿಗಳನ್ನು ಮುಂದುವರಿಸಲಾಗುವುದೇ ;

ಈ) ಕುಂದಾಪುರ ಕ್ಷೇತ್ರದಲ್ಲಿ ಮಂಜೂರಾಗಲು ಬಾಕಿ ಇರುವ ಕಾಮಗಾರಿಗಳು ಯಾವುವು ಮತ್ತು ಮಂಜೂರಾಗಲು ಎಷ್ಟು ಕಾಮಗಾರಿಗಳು ಬಾಕಿ ಇವೆ ?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯ ಮಂತ್ರಿಗಳು) :

ಅ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಸಂಪನ್ಮೂಲಗಳನ್ನಾಧರಿಸಿ ಹಂತ ಹಂತವಾಗಿ ಬಿಲ್ಲುಗಳನ್ನು ಪಾವತಿಸಲಾಗುವುದು.

ಇ) ಮುಂದುವರೆದ ಕಾಮಗಾರಿಗಳನ್ನು ಆಧ್ಯತೆ ಮೇಲೆ ಪೂರ್ಣಗೊಳಿಸಲಾಗುವುದು.

ಈ) ಯಾವುದೂ ಇಲ್ಲ.

ಅನುಬಂಧ–1

ಕ್ರ. ಸಂ.	ಕಾಮಗಾರಿಯ ಹೆಸರು	ಪಾವತಿಗಾಗಿ ಬಾಕಿ ಇರುವ ಬಿಲ್ಲಿನ ಮೊತ್ತ ರೂ.ಗಳು
1.	ರಟ್ಟಾಡಿ ಗ್ರಾಮದ ವಡಂಬೂರು ಎಂಬಲ್ಲಿ ಕಿರುಸೇತುವೆ ರಚನೆ	
2.	ಅಮಾಸೆಬೈಲು ಕೆಳಸಂಕ ರಸ್ತೆಯಲ್ಲಿ ಜಡ್ಡಿನಗದ್ದೆಯಲ್ಲಿ ಡಾಂಬರೀಕರಣ	60904
3.	ಅಮಾವಾಸ್ಯೆ ಬೈಲು ಗ್ರಾಮದ ಜಡ್ಡಿನಗದ್ದೆ ಕೆಳಸಂಕ ರಸ್ತೆಯಲ್ಲಿ ಮೋರಿ ಮತ್ತು ರಸ್ತೆ ರಚನೆ	33191
4.	ಬೆಳ್ವೆ ಗ್ರಾಮದ ಗುಮ್ಮಲದಿಂದ ಸಟ್ಟಳ್ಳಿ ರಸ್ತೆ ಅಭಿವೃದ್ಧಿ	183513
5.	ಕೋಟೇಶ್ವರ ಗ್ರಾಮದ 6ನೇ ವಾರ್ಡ್ ಅರಾಲಗುಡ್ಡೆ ಅರುಣನಮನೆ ರಸ್ತೆ ಅಭಿವೃದ್ಧಿ	155980
6.	ಕೋಣೆ ಗ್ರಾಮದ ಕೆಳಕೇರಿ ರಸ್ತೆ ಅಭಿವೃದ್ಧಿ	183513

7.	ಗಂಗೊಳ್ಳಿ ಮಹಾಂಕಾಳಿ ರಸ್ತೆ ಡಾಂಬರೀಕರಣ (ಕಿ.ಮೀ. 0.00 ದಿಂದ 0.50 ವರೆಗೆ)	29000
8.	ಬಿದ್ಕಲ್ ಕಟ್ಟೆ ಕೊಳನಕಲ್ ರಸ್ತೆಯ ಅಭಿವೃದ್ಧಿ	293237
9.	ಸೌಡ–ಅಗ್ರಹಾರ–ಹಾಲಾಡಿ ಸಂಪಕರ ಸೇತುವೆ	199552
10.	ಮೂಡೂರು ಮೈದಾನ ಉದಯನಗರ ರಸ್ತೆ ಅಭಿವೃದ್ಧಿ	82396

1155 (1300) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಗ್ರಾಮೀಣ ಜನರು ಜಾತಿ ಮತ್ತ ಆದಾಯ ಸರ್ಟಿಫಿಕೇಟು, ಪಡಿತರ ಕಾರ್ಡು, ಆರ್.ಟಿ.ಸಿ. ಇತ್ಯಾದಿಯನ್ನು ಪಡೆಯಲು ತಮ್ಮ ತಮ್ಮ ಹೋಬಳಿ ಮತ್ತು ತಾಲ್ಲೂಕು ಕೇಂದ್ರಗಳಿಗೆ ಹೋಗಬೇಕಾಗಿರುವುದರಿಂದ ಗ್ರಾಮ ಪಂಚಾಯತ್ ಕಾರ್ಯದರ್ಶಿಗಳ ಹುದ್ದೆಯನ್ನು ಮೇಲ್ದರ್ಜೆಗೇರಿಸಿ ಗ್ರಾಮ ಪಂಚಾಯತ್ ಮಟ್ಟದಲ್ಲೇ ಅವುಗಳನ್ನು ಪಡೆಯಲು ಸರಕಾರ ಅನುಕೂಲ ಮಾಡಿಕೊಡಲು ಉದ್ದೇಶಿಸಿದೆಯೇ ;

ಆ) ಹೌದಾದಲ್ಲಿ, ಸದರಿ ಯೋಜನೆಯನ್ನು ಯಾವಾಗ ಜಾರಿಗೆ ತರಲಾಗುವುದು ?

ಡಾ॥ ಹೆಚ್.ಸಿ. ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು) :

ಅ) ಮತ್ತು (ಆ)

ಗ್ರಾಮ ಪಂಚಾಯತಿ ಕಾರ್ಯದರ್ಶಿ ಹುದ್ದೆಗಳನ್ನು ಮೇಲ್ದರ್ಜೆಗೇರಿಸಲು ಉದ್ದೇಶಿಸಲಾಗಿದೆ. ಆ ಸಮಯದಲ್ಲಿ ಈ ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದು.

ಆ) ಮೇಲೆ ತಿಳಿಸಲಾಗಿದೆ.

1156 (370) ಶ್ರೀ ಹಾಲಪ್ಪ ಹೆಚ್. (ಹೊಸನಗರ) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಶಿವಮೊಗ್ಗದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಪ್ರಾರಂಭ ಮಾಡಲಾಗುವುದೇ ;

ಆ) ಹಾಗಿದ್ದಲ್ಲಿ, ಯಾವಾಗಿನಿಂದ ಪ್ರಾರಂಭಿಸಲಾಗುವುದು ಇಲ್ಲವಾದಲ್ಲಿ ಪ್ರಾರಂಭಿಸಲು ಇರುವ ತೊಂದರೆಯೇನು ?

ಶ್ರೀ ಇಕ್ಬಾಲ್ ಅನ್ಸಾರಿ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಹೌದು.

ಆ) 2005–2006ನೇ ಶೈಕ್ಷಣಿಕ ಸಾಲಿನಿಂದ ಸ್ಥಾಪಿಸಲು ಪರಿಶೀಲನೆಯಲ್ಲಿದೆ.

1157 (371) ಶ್ರೀ ಹಾಲಪ್ಪ (ಹೊಸನಗರ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಹೊಸನಗರ ತಾಲ್ಲೂಕಿನಲ್ಲಿ ಪ್ರಾರಂಭಿಸಲಾದ ಸರ್ಕಾರಿ ಪದವೀ ಪೂರ್ವ ಕಾಲೇಜಿನ ಕಟ್ಟಡ ನಿರ್ಮಾಣ ಯಾವ ಹಂತದಲ್ಲಿದೆ ;

ಆ) ಇವುಗಳ ನಿರ್ವಹಣೆಯನ್ನು ಯಾವ ಇಲಾಖೆಗೆ ವಹಿಸಿಕೊಡಲಾಗಿದೆ ;

ಇ) ವರ್ಷಕ್ಕೆ ಎಷ್ಟು ಹಣ ಖರ್ಚಾಗುತ್ತದೆ ?